ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 1737/2024

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಚಂದ್ರ ಎ. ಈ.
ತಂದೆಯ ಹೆಸರು :- ಈರಬೋವಿ
ವಯಸ್ಸು :- 36 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಅಣತಹಳ್ಳಿ

**ಸಾಕ್ಷಿಗೆ ದಿಃ 27.01.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾಸಾ 1 ಮತ್ತು ಆರೋಪಿ ನನಗೆ ಗೊತ್ತು. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇಲ್ಲ. ನಾನು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ದಿಃ 08.08.2024 ರಂದು ಮದ್ಯಾಹ್ನ 2.10 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ 3 ಅವರು ಚಾಸಾ 1 ಅವರ ಹಾಲಿನ ಡೈರಿ ಹತ್ತಿರ ಇದ್ದಾಗ ಆರೋಪಿಅವರ ಸಂಘದಿಂದ ಜಾಮೀನು ಆಗಿ ದುಡ್ಡು ಕೊಡಿಸುಯಂದು ಚಾಸಾ 1 ಅವರಿಗೆ ಪಿಡಿಸುತ್ತಿದ್ದರು. ಆಗ ಚಾಸಾ 1 ಅವರು ನಾನು ಆಗಲೇ ನಿನಗೆ ಜಾಮೀನು ಆಗಿ ದುಡ್ಡು ಕೊಡಿಸಿ ಅನುಬವಿಸಿದ್ದೇನೆ. ಬೇರೆ ಯಾರನ್ನಾದರು ಕರೆದೊಂಡು ಬಂದು ಹಣ ಪಡೆದುಕೊ ಎಂದು ಹೇಳಿದ್ದಕ್ಕೆ ಆರೋಪಿ ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಹಾಲಿನ ಡೈರಿಯ ಹತ್ತಿರ ಕಬ್ಬಿಣದ ರಾಡನ್ನು ತಗೆದುಕೊಂಡು ಚಾಸಾ 1 ಅವರ ಎಡಕೆನ್ನೆಯ ಹತ್ತಿರ ಹೊಡೆದು ನಿನಗೆ 1 ಗತಿ ಕಾಣಿಸದೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನಂತರ ನಾನು ಮತ್ತು ಚಾಸಾ 3 ಅವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ 1 ಅವರನ್ನು ಹು.ದುರ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ದೂರನು ನೀಡಿರುವ ವಿಚಾರ ಗೊತ್ತಾಗಿರುತ್ತದೆ ಎಂದರೆಸರಿಯಲ್ಲ.

ದಿಃ 08.08.2024 ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ 4 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಸಹ ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.